


ವಿದ್ಯಾರ್ಥಿ: ಸರ್. ನನ್ನ ಫಲಿತಾಂಶವನ್ನು ತಾವು ಈ ಮೇಲ್ ಮೂಲಕ ನಮ್ಮ ಮನೆಗೆ ಕಳುಹಿಸುವಿರಾ?

ಶಿಕ್ಷಕ: ಆದರೆ ನಿಮ್ಮ ಮನೆಯಲ್ಲಿ ಕಂಪ್ಯೂಟರೇ ಇಲ್ವಲ್ಲ.

ವಿದ್ಯಾರ್ಥಿ: ಅದಕ್ಕೇ ಹೇಳಿದ್ದು.

★★★

ಪತಿ: ಆಪರೇಷನ್‌ನಲ್ಲಿ ನನಗೇನಾದರೂ ಹೆಚ್ಚು ಕಡಿಮೆಯಾದರೆ ನೀನು ಆಪರೇಷನ್ ಮಾಡಿದ ಡಾಕ್ಟರರನ್ನೇ ಮದುವೆಯಾಗು.

ಪತ್ನಿ: ಹೀಗೇಕೆ ಹೇಳುತ್ತಿದ್ದೀರಿ.

ಪತಿ: ಸೇಡು ತೀರಿಸಿಕೊಳ್ಳುವುದಕ್ಕೆ ಇದಕ್ಕಿಂತ ಉತ್ತಮ ಉಪಾಯ ಯಾವುದಿದೆ ಹೇಳು?

★★★

ಮೊಮ್ಮಗ: ಅಜ್ಜ ನಿಮ್ಮ ಪೆನ್ಶನ್‌ನಿಂದ ನನಗೆ 500ರೂ. ಸಾಲ ಕೊಡಿ.

ಅಜ್ಜ: ಅದನ್ನು ಯಾವಾಗ ಹಿಂದಿರುಗಿಸುವೆ.

ಮೊಮ್ಮಗ: ನನಗೆ ಪೆನ್ಶನ್ ಬಂದಾಗ.

★★★




ನರ್ಸರಿ ಕ್ಲಾಸಿನ ಚಿಲ್ಟಾರಿ: ಮಿಸ್ ನೀವು ನಿನ್ನೆ ನನ್ನ ಡ್ಯಾಡಿಗೆ ಫೋನ್ ಮಾಡಿದ್ದಿರೇನು?

ಮಿಸ್: ಇಲ್ಲ, ನಾನೇಕೆ ನಿನ್ನ ಡ್ಯಾಡಿಗೆ ಫೋನ್ ಮಾಡಲಿ?

ಚಿಲ್ಟಾರಿ: ಮತ್ತೆ ನನ್ನ ಡ್ಯಾಡಿಯ ಫೋನಿನಲ್ಲಿ ಮಿಸ್ ಕಾಲ್ ಎಂದು ಬಂದಿತ್ತಲ್ಲ.

★★★




ಪತಿ: ತಮಾಷೆ ಮಾಡುವ ನಿಮ್ಮ ತಂದೆಯವರ ಸ್ವಭಾವ ಬದಲಾದಂತೆ ತೋರುವುದಿಲ್ಲ.

ಪತ್ನಿ: ಏಕೆ ಹಾಗೆ ಹೇಳುವಿರಿ?

ಪತಿ: ಏಕೆಂದರೆ ನನ್ನ ಮಗಳನ್ನು ಮದುವೆಯಾಗಿ ನೀನು ಸುಖವಾಗಿದ್ದಿಯಾ ಎಂದು ಕೇಳುತ್ತಾರಲ್ಲ.

★★★

ಶಿಕ್ಷಕ: ನಾಳೆ ನೆಪ್ಚೂನ್ ಮತ್ತು ಪ್ಲೂಟೋ ಗ್ರಹಗಳ ಬಗ್ಗೆ ನಮ್ಮ ಶಾಲೆಯ ಕಾನ್ಫರೆನ್ಸ್ ಹಾಲಿನಲ್ಲಿ ಸುಪ್ರಸಿದ್ಧ ಖಗೋಳ ವಿಜ್ಞಾನಿಯೊಬ್ಬರ ಉಪನ್ಯಾಸವಿದೆ ಎಲ್ಲರೂ ತಪ್ಪದೇ ಹಾಜರಾಗಿ.

ಗುಂಡ: ನನಗೆ ಬರಲು ಆಗುವುದಿಲ್ಲ ಸರ್.

ಶಿಕ್ಷಕ: ಏಕೆ?

ಗುಂಡ: ಅಷ್ಟು ದೂರಕ್ಕೆ ಹೋಗಲು ನಮ್ಮ ಅಮ್ಮ ಅನುಮತಿ ನೀಡುವುದಿಲ್ಲ.

★★★

ಒಬ್ಬ ಮಹಿಳೆ: ಸರ್, ನನ್ನ ಯಜಮಾನರು ನಿದ್ರೆಯಲ್ಲಿ ಮಾತನಾಡುತ್ತಾರಲ್ಲ. ಈ ಅಭ್ಯಾಸವನ್ನು ಹೇಗೆ ತಪ್ಪಿಸಲಿ?

ಡಾಕ್ಟರು: ಅವರಿಗೆ ಹಗಲು ಮಾತನಾಡಲು ಅವಕಾಶ ಕೊಡಿ.

★★★

ಹೆಂಡತಿ: ನೀವು ತಲೆಗಷ್ಟೇ ಅಲ್ಲದೆ ಭುಜಕ್ಕೂ ಕೂಡ ಶಾಂಪು ಹಾಕಿಕೊಂಡಿರುವಿರಲ್ಲ.

ಗಂಡ: ಹೌದು! ಇದು 'ಹೆಡ್ ಅಂಡ್ ಶೋಲ್ಡಾರ್ಸ್' ಶಾಂಪೂ ಅಲ್ಲವೆ?

**-ಮುರಲೀಧರ ಕುಲಕರ್ಣಿ, ಬೀದರ್**




★ ಆಮ್ಲತೆ ★ ಕರುಳಿನ ಹುಣ್ಣು
★ ಮಲಬದ್ಧತೆ ★ ಅಜೀರ್ಣ

ಇವುಗಳು ಜೀರ್ಣಶಕ್ತಿಯ ಕೊರತೆಯಿಂದ ಉಂಟಾಗುವ ಸಾಮಾನ್ಯ ತೊಂದರೆಗಳು

ಬೈದ್ಯನಾಥ್ ಪರಿಚಯಿಸುತ್ತಿದೆ

ಡೈ-ಜಿವಿನ್

ಈಗ 7 ದಿನಗಳಲ್ಲಿ ಜೀರ್ಣಕ್ರಿಯೆ ಸುಧಾರಣೆಯಾಗಿ ಅದರಿಂದ ಅನುಕೂಲ ಉಂಟಾಗುವ ಅನುಭವ ಪಡೆಯಿರಿ.

- ಈಗ ಬೈದ್ಯನಾಥ್‌ರವರ ಡೈ-ಜಿವಿನ್ ಪರೀಕ್ಷಿಸಲ್ಪಟ್ಟ ಗಿಡಮೂಲಿಕೆ ಒಳಗೊಂಡು ಸಿದ್ಧವಾಗಿ ಬಂದಿದೆ. ಇದು ಇಡೀ ಜೀರ್ಣಕ್ರಿಯೆಯ ವ್ಯವಸ್ಥೆಯನ್ನು ಪ್ರಚೋದಿಸುವುದು ಮತ್ತು ಬಲಪಡಿಸುವುದು.
- ಕಿಣ್ವಗಳು ಮತ್ತು ಜೀರ್ಣರಸವನ್ನು ಉತ್ಪತ್ತಿ ಮಾಡುವ ಕ್ರಿಯೆಯನ್ನು ಸುಧಾರಿಸುವುದು. ಇದರಿಂದ ಜೀವರಾಸಾಯನಿಕ ಕ್ರಿಯೆ ಮತ್ತು ಜೀರ್ಣವಾದ ಆಹಾರದ ಹೀರಿಕೆ ಕ್ರಿಯೆಯನ್ನು ಸುಧಾರಣೆಯಾಗುವುದು.

ಜೀರ್ಣಕ್ರಿಯೆ ಸುಧಾರಿಸುವುದು
ರೋಗ ನಿರೋಧಕ ಶಕ್ತಿ ಹೆಚ್ಚುವುದು.




ಹೆಚ್ಚಿಸುವುದು.... ರೋಗ ನಿರೋಧಕ ಶಕ್ತಿ

ಕಸ್ಟಮರ್ ಕೇರ್ – ಕಮ್ಮನಹಳ್ಳಿ: 9663546007
ಕೋರಮಂಗಲ: 9591779772